PW-1 ಸಾಕ್ಷಿಯನ್ನು ದಿಃ 02.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ. ಜಿ.ಜಿ.ಜಿ. ವಕೀಲರಿಂದಃ-

41. ನೀವು ಈಗ ನ್ಯಾಯಾಲಯದಲ್ಲಿ ಇರುವ 2 ನೇ ಆರೋಪಿಯ ಮೇಲಾಗಲೀ ಅಥವಾ ಈ ಪ್ರಕರಣದಿಂದ ಕೈ ಬಿಟ್ಟ ಸತ್ಯ ನಾರಾಯಣ ಶಾಸ್ತ್ರೀ ಮತ್ತು ಸತೀಶ್ ರವರ ವಿರುದ್ದ ಇಲಾಖಾ ವಿಚಾರಣಾ ಮಾಡಿದಿರಾ ಎಂದರೆ ನಾನು ಇಲಾಖಾ ವಿಚಾರಣೆಯನ್ನು ಮಾಡಲು ಬರುವುದಿಲ್ಲ ಆದರೆ ಇಲಾಖಾ ವಿಚಾರಣೆ ಮಾಡುವವರು ದೇವಸ್ಥಾನದ ವ್ಯವಸ್ತಾಪನ ಸಮಿತಿಯವರಾಗಿರುತ್ತಾರೆ ಮತ್ತು ಅವರು ಇಲಾಖಾ ವಿಚಾರಣೆ ಮಾಡುವುದು ಬೇಡ ನೇರವಾಗಿ ದಂಡ ವಿಧಿಸೋಣ ಎಂದು ಹೇಳಿ ಸತ್ಯ ನಾರಾಯಣ ಶಾಸ್ತ್ರೀ ಮತ್ತು ಸತೀಶ್ ರವರ ಮೇಲೆ ದಂಡವನ್ನು ವಿಧಿಸಿದರು. ನಿಮಗೆ ದೇವಸ್ಥಾನದ ವ್ಯವಸ್ತಾಪನ ಸಮಿತಿಯವರು ಸತ್ಯ ನಾರಾಯಣ ಶಾಸ್ತ್ರೀ ಮತ್ತು ಸತೀಶ್ ರವರ ಮೇಲೆ ದಂಡ ವಿಧಿಸೋಣ ಎಂದು ಯಾವಾಗ ನಿಮಗೆ ಲಿಖಿತ ಆದೇಶ ಬಂತು ಎಂದರೆ ನನಗೆ ದಿನಾಂಕ ಜ್ಞಾಪಕ ಇಲ್ಲ . ನೀವು ಈ ಸತ್ಯ ನಾರಾಯಣ ಶಾಸ್ತ್ರೀ ಮತ್ತು ಸತೀಶ್ ರವರಿಂದ ಫೈನ್ ಹಣವನ್ನು ಕಟ್ಟಿಸಿಕೊಂಡಿದ್ದೀರಾ ಎಂದರೆ ದೇವಸ್ಥಾನದ ವ್ಯಾವಸ್ತಾಪನ ಸಮಿತಿಯ ನಿರ್ಧಾರದ ಮೇಲೆ ಇಬ್ಬರಿಂದಲೂ ಸಹ 50,000 /- ರೂಪಾಯಿಯಂತೆ ಹಣವನ್ನು ಕಟ್ಟಿಸಿಕೊಂಡಿದ್ದೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ನೀಡಿ ನೀವು ಇದೇ ಆದೇಶದ ಪ್ರಕಾರ 50,000/- ರೂ ಹಣವನ್ನು ಕಟ್ಟಿಸಿಕೊಂಡಿದ್ದು ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ತಮ್ಮ ಕೈಯಲ್ಲಿ ಹಿಡಿದು ನೋಡಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಆ ದಾಖಲಾತಿಯನ್ನು ತೋರಿಸಿ ಇದರಲ್ಲಿ ಇರುವ ಈ ಸಹಿಯು ತಮ್ಮದು ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ದಿಃ 22-01-2018 ರ ಆದೇಶವನ್ನು ಹಾಗೂ ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 3 ಎಂದು ಸಾಕ್ಷಿಯ ಸಹಿಯನ್ನು ನಿಡಿ 3(ಎ) ಎಂದು ಗುರುತಿಸಲಾಯಿತು.

42. ಸಾಕ್ಷಿಗೆ ಈಗ ನಿಡಿ 3 ಅನ್ನು ತೋರಿಸಿ ಇದರಲ್ಲಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿತ ಡಿ ನಾಗರಾಜು ರವರಿಂದಲೂ ಸಹ 50,000 ಹಣವನ್ನು ಕಟ್ಟಿಸಿಕೊಳ್ಳಿ ಎಂದು ದೇವಸ್ಥಾನದ ವ್ಯವಸ್ತಾಪನ ಮಂಡಳಿಯವರು ಆದೇಶ ಮಾಡಿರಲಿಲ್ಲ ಎಂದರೆ ಹೌದು. ನೀವು 2 ನೇ ಆರೋಪಿತನಿಗೂ ಸಹ ದೇವಸ್ಥಾನದ ವ್ಯವಸ್ತಾಪನ ಮಂಡಳಿಯ ಮುಂದೆ ಹೋಗಿ ಹಾಜರಾಗಿ ಎಂದು ಹೇಳಿ 2 ನೇ ಆರೋಪಿತನಿಗೂ ಸಹ ನೀವು ಶಿಪಾರಸ್ಸು ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ನನ್ನ ಮುಂದೆ ಆಗ ಆ ಇಬ್ಬರು ಮಾತ್ರ ದೇವಸ್ಥಾನ ವ್ಯವಸ್ಥಾಪನ ಆದೇಶವನ್ನು ತೆಗೆದುಕೊಂಡು ಬಂದಿದ್ದರು ಮತ್ತು ನನಗೆ 2 ನೇ ಆರೋಪಿತನ ಹೆಸರನ್ನು ಶಿಪಾರಸ್ಸು ಮಾಡಲು ಅವಶ್ಯಕತೆ ಅನಿಸಲಿಲ್ಲ. ಈ ರೀತಿ ಆದೇಶ ಮಾಡಲು ದೇವಸ್ತಾನದ ವ್ಯಾವಸ್ತಾಪನ ಮಂಡಳಿಯವರನ್ನು ಬಿಟ್ಟರೆ ಮತ್ತೆ ಬೇರೆ ಯಾರಿಗೆ ಆ ರೀತಿ ಆದೇಶ ಮಾಡಲು ಅಧಿಕಾರವಿರುತ್ತದೆ ಎಂದರೆ ಜಿಲ್ಲಾಧಿಕಾರಿಗಳಿಗೆ ಅಥವಾ ಧಾರ್ಮಿಕ ದತ್ತಿ ಆಯುಕ್ತರಿಗೆ ಕಮಿಟಿ ಮಾಡಿ ಎನ್ಕ್ವ ರಿ ಮಾಡಲು ಆದೇಶ ನೀಡುವ ಅಧಿಕಾರವಿರುತ್ತದೆ. ನಿಮಗೆ ಜಿಲ್ಲಾಧಿಕಾರಿಗಳಿಂದಾಗಲೀ ಅಥವಾ ಧಾರ್ಮಿಕ ದತ್ತಿ ಆಯೋಗದಿಂದಾಗಲೀ 2 ನೇ ಆರೋಪಿತನ ವಿರುದ್ದವೂ ಸಹ ಆಂತರಿಕ ಇಲಾಖಾ ವಿಚಾರಣೆ ಮಾಡಿ ಆದೇಶ ಮಾಡಿ ಎಂದು ತಮಗೆ ಆದೇಶವಿತ್ತಾ ಎಂದರೆ ನ್ಯಾಯಾಲಯದಲ್ಲಿ ಈಗಾಗಲೇ ಪ್ರಕರಣ ನಡೆಯುತ್ತಿದ್ದುದರಿಂದ ಆ ರೀತಿಯ ಆದೇಶವು ಇರಲಿಲ್ಲ.

43. ಪ್ರತಿ ದಿನ ಎಲ್ಲಾ ಪೂಜಾ ವಿಧಿ ವಿಧಾನಗಳು ಮುಗಿದ ನಂತರ ರಾತ್ರಿ ವೇಳೆಯಲ್ಲಿ ದೇವಿಗೆ ಅಲಂಕಾರ ಮಾಡಿದ ಬಂಗಾರದ ಒಡವೆಗಳನ್ನು ಮತ್ತೆ ತೆಗೆದು ಇಡುವ ಪದ್ದತಿಯು ದೇವಸ್ಥಾನದಲ್ಲಿ ಇದೆಯಾ ಎಂದರೆ ಅದನ್ನು ಅರ್ಚಕರು ಮಾಡುತ್ತಾರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನೀವು ದೇವಿಗೆ ಅಲಂಕರಿಸಿದ ಆಭರಣಗಳನ್ನು ರಾತ್ರಿ ತೆಗೆದು ಇಡಬೇಕು ಎಂದು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಎಂದರೆ ನನಗೆ ನೆನಪು ಇಲ್ಲ.

44. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯು ಮೊದಲನೆಯ ಬಾರಿಗೆ ದೇವಿಯ ಆಭರಣಗಳು ಮುಕ್ಕಾಗಿವೆ ಎಂದು ತಮ್ಮ ಗಮನಕ್ಕೆ ಲಿಖಿತ ರೂಪದಲ್ಲಿ ದಿಃ 10-06-2015 ರಂದು ತೆಗೆದುಕೊಂಡು ಬಂದರು ಎಂದರೆ 2 ನೇ ಆರೋಪಿಯು ನನಗೆ ಲಿಖಿತವಾಗಿ ಮೊದಲನೆಯ ಬಾರಿಗೆ ದೇವಿಯ ಆಭರಣಗಳು ಮುಕ್ಕಾಗಿವೆ ಎಂದು ನನ್ನ ಗಮನಕ್ಕೆ ತೆಗೆದುಕೊಂಡು ಬಂದರು ಆದರೆ ಅದು ದಿಃ 15-06-2015 ರಂದು. ದಿಃ 10-06-2015 ರ ಮೊದಲಿಗೆ ದೇವಸ್ಥಾನದ ದೇವಿಗೆ ಪೂಜೆಯನ್ನು ಯಾರೂ ಮಾಡುತ್ತಿದ್ದರೂ ಎಂದು ಹೇಳಲು ಬರುತ್ತದೆಯಾ ಎಂದರೆ ಹಿಂದಿನ ದಿನ ಸೋಮಶೇಖರ್ ಶರ್ಮಾ ರವರ ಪೂಜೆ ಮಾಡಿದ್ದರು.

45. ಅರ್ಚಕರ ಮಧ್ಯೆ ತಟ್ಟೆ ಕಾಸಿನ ಸಂಬಂಧ ವಿವಾದ ಉಂಟಾಗಿತ್ತು ಎಂದರೆ ಹೌದು. ಈ ತಟ್ಟೆ ಕಾಸಿನ ವಿಚಾರವಾಗಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ಆನಂದ ಕುಮಾರ್ ರವರು ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರೂ ಎಂದರೆ ಅದು ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯವು ಪ್ರತಿ ಅರ್ಚಕರು ಒಂದು ವಾರ ಪೂಜೆ ಮಾಡುವಾಗ ಅವರ ಸರದಿಯಲ್ಲಿ ಬರುವ ತಟ್ಟೆ ಕಾಸನ್ನು ಅವರೇ ತೆಗೆದುಕೊಳ್ಳಬೇಕು ಎಂದು ಆದೇಶ ಮಾಡಿರುವ ವಿಚಾರವನ್ನು ತಮ್ಮ ಗಮನಕ್ಕೆ ದೇವಸ್ಥನಾದಲ್ಲಿರುವ ಅರ್ಚಕರು ತಂದಿದ್ದರೂ ಎಂದರೆ ಅದು ನಮ್ಮ ಫೈಲಿನಲ್ಲಿ ಇಲ್ಲ ಆದರೆ ಅರ್ಚಕರು ಒಂದು ಪತ್ರವನ್ನು ನನಗೆ ತೋರಿಸಿದ್ದರು. ನಂತರ ಅರ್ಚಕರು ತಮ್ಮ ಬಳಿಯಲ್ಲಿ ಈ ವಿಚಾರವನ್ನು ತಂದಾಗ ತಾವು ತಟ್ಟೆ ಕಾಸನ್ನು ಸಮನಾಗಿ ಹಂಚಿಕೊಳ್ಳಿ ಎಂದು ಮೌಖಿಕವಾಗಿ ಹೇಳಿದಿರಿ ಎಂದರೆ ಹೌದು.

46. ಸಾಕ್ಷಿಗೆ ಈಗ ದಿಃ 22-06-2015 ರ ಆರೋಪಿ ಸೋಮಶೇಖರ್ ಶರ್ಮಾ ರವರ ಹೇಳಿಕೆಯ 2 ನೇ ಪುಟವನ್ನು ತೋರಿಸಿ ಪ್ಯಾರಾ ನಂ.2 ರಲ್ಲಿಯ ಪ್ರಕಾರ ನೀವು ದಿಃ 19-02-2015 ರಂದು ಈ ತಟ್ಟೆ ಕಾಸಿನ ವಿಚಾರವಾಗಿ ಮೀಟಿಂಗ್ ಮಾಡಿದಿರಿ ಎಂದರೆ ಸಾಕ್ಷಿಯು ಆರೋಪಿ ಸೋಮಶೇಖರ್ ಶರ್ಮಾ ರವರ 2 ನೇ ಪ್ಯಾರಾವನ್ನು ನೋಡಿ ಓದಿ ನಾನು ದಿಃ 19-02-2015 ರಂದು ಮೀಟಿಂಗ್ ಮಾಡಿಲ್ಲ ಆದರೆ ಜೂನ್ 2015 ರಲ್ಲಿ

ಮೀಟಿಂಗ್ ಮಾಡಿ ಹೇಳಿರುತ್ತೇನೆ. ಈ ರೀತಿ ಮೀಟಿಂಗ್ ಮಾಡಿದ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಮತ್ತು ದಾಖಲಾತಿ ಇದೆ ಎಂದರೆ ಇದು ತಟ್ಟೆ ಕಾಸಿನ ಹಣವು ಸರ್ಕಾರಕ್ಕೆ ಬರುವುದಿಲ್ಲ ಮತ್ತು ಇದು ಅನ್ ಅಫಿಷಿಯಲ್ ಮೀಟಿಂಗ್ ಆಗಿರುತ್ತದೆ ಹೀಗಾಗಿ ಅಲ್ಲಿ ಯಾವುದೇ ಪ್ರೋಸಿಡಿಂಗ್ಸ್ ಬುಕ್ ಅನ್ನು ಮೇಂಟೇನ್ ಮಾಡಲಿಲ್ಲ ಆದರೆ ಮೀಟಿಂಗ್ ಮೊದಲೇ ಅರ್ಚಕರ ಸರದಿಯನ್ನು ಹಾಕಿರುತ್ತೇವೆ. ನೀವು ಯಾವ ಅರ್ಚಕರು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೂ ದೇವಿಯ ಪೂಜೆ ಮಾಡಬೇಕು ಎಂದು ಮತ್ತು ಆ ವಾರದಲ್ಲಿ ಬಂದ ತಟ್ಟೆ ಕಾಸು ಅವರಿಗೆ ಸೇರಬೇಕು ಎಂದು ಹಾಕಿರುವ ಸರದಿಯ ದಾಖಲಾತಿಯು ತಮ್ಮ ಬಳಿ ಇದೆಯಾ ಎಂದರೆ ನಾನು ತಟ್ಟೆ ಕಾಸಿನ ವಿಚಾರವಾಗಿ ಸರದಿಯನ್ನು ಹಾಕಿಲ್ಲ ಆದರೆ ದೇವಿಯ ಪೂಜೆಯನ್ನು ಯಾವ ಅರ್ಚಕರು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಮಾಡಬೇಕು ಎಂದು ಸರದಿ ಹಾಕಿರುತ್ತದೆ.

47. ನೀವು ಸರದಿ ಹಾಕಿದ ನಂತರ ಪ್ರಧಾನ ಅರ್ಚಕರು ಕಾರಾಣಾಂತರಗಳಿಂದ ಆ ದಿನ ದೇವಿಯ ಪೂಜೆಗೆ ಗೈರು ಹಾಜರಾದರೆ ನೀವು ಬೇರೆ ಅರ್ಚಕರನ್ನು ನೇಮಕ ಮಾಡುತ್ತಿರಾ ಅಥವಾ ಅರ್ಚಕರು ತಮ್ಮಷ್ಟಕ್ಕೆ ತಾವೇ ನೇಮಕ ಮಾಡಿಕೊಳ್ಳುತ್ತಾರಾ ಎಂದರೆ ಪ್ರಧಾನ ಅರ್ಚಕರು ರಜಾ ವನ್ನು ಪಡೆದಾಗ ನಾವು ಬೇರೆ ಅರ್ಚಕರನ್ನು ನೇಮಕ ಮಾಡುತ್ತೇವೆ. ನೀವು ಹೇಳುವ ಹಾಗೆ ಘಟನೆ ನಡೆದ ಅಂದರೆ ದಿಃ 10-06-2015 ರ ಹಿಂದಿನ ವಾರದಲ್ಲಿ ಪ್ರಧಾನ ಅರ್ಚಕರು ಕೆಲಸ ಮಾಡಿದ್ದಾರಾ ಎಂದರೆ ಮಾಡಿದ್ದಾರೆ. ದಿಃ 09-06-2015 ರ ನಂತರ ನ್ಯಾಯಾಲಯದ ಮುಂದಿರುವ 2 ನೇ ಆರೋಪಿತನನ್ನು ದೇವಿಯ ಪೂಜೆಗಾಗಿ ತಾವು ನೇಮಕ ಮಾಡಿದಿರಾ ಎಂದರೆ ನಾನು ಮತ್ತೆ ವಿಶೇಷವಾಗಿ ನೇಮಕ ಮಾಡುವ ಪ್ರಮೇಯಾ ಬರಲಿಲ್ಲ. ಪ್ರಧಾನ ಅರ್ಚಕರಾದ ಸತ್ಯ ನಾರಾಯಣ ಶಾಸ್ತ್ರೀ ರವರು ದಿಃ 09-06-2015 ರ ಹಿಂದಿನ ವಾರ ದೇವಿಯ ಪೂಜೆ ಕಾರ್ಯವನ್ನು ಮಾಡಲು ತಾವು ನೇಮಕನೇ ಮಾಡಿರಲಿಲ್ಲ ಎಂದರೆ ನಾವು ನೇಮಕ ಮಾಡಿದ್ದೆವು. ನೀವು ಸತ್ಯ ನಾರಾಯಣ ಶಾಸ್ತ್ರೀ ರವರ ಕೈ ಕೆಳಗಡೆ 2 ನೇ ಆರೋಪಿತನನ್ನು ಕೆಲಸ ಮಾಡಲು ನೇಮಕವೇ ಮಾಡಿರಲಿಲ್ಲ ಎಂದರೆ ಸರದಿಯ ಆರ್ಡರ್ ಪ್ರಕಾರ ನೇಮಕ ಮಾಡಿರುತ್ತದೆ ಮತ್ತು ನಾನು

ಸರದಿಯ ಆರ್ಡರ್ ಅನ್ನು ನೋಡಿದರೆ ನಾನು ಸ್ಪಷ್ಟವಾಗಿ ಹೇಳಬಲ್ಲೆ. ದಿಃ 09-06-2015 ರಂದು ಮತ್ತು ದಿಃ 10-06-2015 ರಂದು 2 ನೇ ಆರೋಪಿಯು ದೇವಿಯ ಪೂಜೆಗಾಗಿ ನೇಮಕ ಆಗಿರಲಿಲ್ಲ ಎಂದರೆ ನಾನು ಸರದಿ ಆರ್ಡರ್ ಅನ್ನು ನೋಡಿದರೆ ಗೊತ್ತಾಗುತ್ತದೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ